3) ಪ್ರಾಯೋಜಿತ ಕಾರ್ಯಕ್ರಮದ ಯೋಜನೆಯಡಿ ನಾಟಕ ಪ್ರದರ್ಶನಗಳಿಗೆ ಪ್ರಯೋಜನೆ ನೀಡಲಾಗುತ್ತಿದೆ.

4) ಜೋತೆಗೆ ಇಲಾಖೆಯ ಆಡಳಿತಕ್ಕೊಳಪಟ್ಟ ಕರ್ನಾಟಕ ನಾಟಕ ಆಕಾಡೆಮಿಯು ವೃತ್ತಿ ರಂಗಭೂಮಿಗೆ ಸಂಬಂಧಿಸಿದಂತೆ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.

ಇ) ಸರ್ಕಾರವು ಏಕ ಗವಾಕ್ಷಿ ಪದ್ದತಿಯಡಿ ವೃತ್ತಿ ರಂಗಭೂಮಿ ಕಂಪನಿಗಳ ಪ್ರದರ್ಶನಕ್ಕೆ ಪರವಾನಗಿ ನೀಡಲು, ಸರ್ಕಾರಿ ಆದೇಶ ಸಂ.ಹೆಚ್.ಡಿ.103.ಸಿಎನ್ಎ 97 ದಿನಾಂಕ 17.11.99 ಆದೇಶಿಸಲಾಗಿದೆ.

1) ಅಂದರೆ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಗರಪಾಲಿಕೆ ವ್ಯಾಪ್ತಿಯಲ್ಲಿ ಪೋಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ಉಪವಿಭಾಗ ಕೇಂದ್ರ ವ್ಯಾಪ್ತಿಯಲ್ಲಿ ಉಪವಿಭಾಗಾಧಿಕಾರಿಗಳಲ್ಲಿ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಆಯಾಯ ಇಲಾಖೆಗಳ ಪ್ರತಿನಿಧಿಗಳನ್ನು ಸದಸ್ಯರನ್ನಾಗಿ ನೇಮಿಸಿ ಸಮಿತಿಯನ್ನು ರಚಿಸಲಾಗಿದೆ.

2) ಈ ಸಮಿತಿಗಳ ಅಧ್ಯಕ್ಷರು ಲೈಸೆನ್ಸಿಂಗ್ ಅಂಡ್ ಕಂಟ್ರೋಲಿಂಗ್ ಸ್ಟೇಸಸ್ ಆಫ್ ಪಬ್ಲಿಕ್ ಅಮ್ಯೂಸ್‌ಮೆಂಟ್ ಆದೇಶದನ್ವಯ ನಾಟಕ ಪ್ರದರ್ಶನಕಾರರು ಅರ್ಜಿ ಸಲ್ಲಿಸಿದ ದಿನಾಂಕದಿಂದ 15 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಇಲಾಖೆಗಳಿಂದ ಅಭಿಪ್ರಾಯ ಪಡೆದು ತದನಂತರ 10 ದಿನಗಳಲ್ಲಿ ಏಕಗವಾಕ್ಷಿ ಸಭೆ ಕರೆದು ಪರವಾನಗಿ ನೀಡುತ್ತಾರೆ.

ಈ) ಉದ್ಭವಿಸುವುದಿಲ್ಲ.

ಉ) ವೃತ್ತಿ ರಂಗಭೂಮಿ ಕಂಪನಿಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಕಾಯಕಲ್ಪ ಯೋಜನೆಯನ್ನು ರೂಪಿಸಿ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ.

965(1354) ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ (ಅದಿರು, ಕಬ್ಬಿಣ,ಮ್ಯಾಂಗನೀಸ್) ಅನುಮತಿ ನೀಡಿರುವ ಪ್ರದೇವಗಳೆಷ್ಟು (ಪ್ರದೇಶ, ವ್ಯಕ್ತಿ ಹಾಗೂ ಕಂಪನಿಯು ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಅನುಮತಿ ನೀಡುವ ಮೊದಲು ಅರಣ್ಯ ಮತ್ತು ಪರಿಸರ ಇಲಾಖೆಗಳ ನಿರಾಕ್ಷೇಪಣೆಗಳನ್ನು ಪಡೆದುಕೊಳ್ಳಲಾಗಿದೆಯೇ;

ಇ) ಕಡೂರು ತಾಲ್ಲೂಕು ಬೀರೂರು ಹೋಬಳಿ ಹೋಗ ರೇಖಾನುಗಿರಿಯಲ್ಲಿ ಗಣಿಗಾರಿಕೆಗೆ ಅನುಮತಿ ನೀಡುರುವ ಜಮೀನೆಷ್ಟು ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಮೆ:ವಿ.ಐ.ಎಸ್.ಎಲ್. ಸಂಸ್ಥೆಯವರಿಗೆ ದಿನಾಂಕ: 01.04.1963ರಂದು 20 ವರ್ಷಗಳ ಅವಧಿಗೆ 738.55 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿಣದ ಅದಿರು ಮತ್ತು ಯಲ್ಲೊ ಓಕರ್ ಖನಿಜಗಳಿಗಾಗಿ ಗಣಿಗಾರಿಕಾ ಪರವಾನಗಿಯನ್ನು ನೀಡಲಾಗಿದೆ. 1981ರಲ್ಲಿ ಮೆ: ವಿ.ಐ.ಎಸ್.ಎಲ್. ಸಂಸ್ಥೆಯವರು ಗಣಿ ಗುತ್ತಿಗೆಯನ್ನು ನವೀಕರಿಸಲು

ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯನ್ನು ಒಂದು ವರ್ಷದೊಳಗಾಗಿ ಪರಿಗಣಿಸದ್ದರಿಂದ ಆಗಿದ್ದ ಎಂ.ಸಿ.ಆರ್. ನಿಯಮ 24(3)ರಂತೆ ತಿರಸ್ಕೃತಗೊಂಡಿತು. ಆಗಿದ್ದ ಎಂ.ಸಿ.ಆರ್. 1960ರ ನಿಯಮ 24(3)ರ ಪ್ರಕಾರ ಸಲ್ಲಿಸಿದ್ದ ಯಾವುದೇ ಅರ್ಜಿಯನ್ನು 12 ತಿಂಗಳ ಒಳಗಾಗಿ ವಿಲೇ ಮಾಡದಿದ್ದಲ್ಲಿ ಸದರಿ ಅರ್ಜಿಯು ಡೀಮ್ಡ್ ರಿಜೆಕ್ಷನ್ (deemed rejected) ಆಗುತ್ತಿತ್ತು. ಈ ನಿಯಮವನ್ನು ದಿನಾಂದ 19–10–89 ರಂದು ಕೈಬಿಡಲಾಗಿದೆ. ನಂತರ ಸದರಿ ಸಂಸ್ಥೆಯು ಭಾರತ ಸರ್ಕಾರಕ್ಕೆ ಪರಿಷ್ಕರಣ ಅರ್ಜಿಯನ್ನು ಸಲ್ಲಿಸಿತ್ತು. ಭಾರತ ಸರ್ಕಾರವು ಮೆ:ಪಿ.ಐ.ಎಸ್.ಎಲ್. ಸಂಸ್ಥೆಯು ಸಲ್ಲಿಸಿದ ಪರಿಷ್ಕರಣ ಅರ್ಜಿಯನ್ನು ಊರ್ಜಿತಗೊಳಿಸಿದೆ. ಸದರಿ ಸಂಸ್ಥೆಯವರೆ ಮನವಿಯ ಅನ್ವಯ ಕಂದಾಯ ವ್ಯಾಪ್ತಿಗೆ ಬರುವ 42.70 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ ವಿಮೋಚನಾ ಪತ್ರಗಳನ್ನು ಪಡೆದ ನಂತರ ನಿಯಮಾನುಸಾರ 42.70 ಹೆಕ್ಟೇರ್ ಪ್ರದೇಶಕ್ಕೆ ದಿನಾಂಕ. 01–03–2004ರ ಅದಿಸೂಚನೆ ಸಂಖ್ಯೆ: ಸಿಐ/5 ಎಂಎಂಎಂ. 2002ರಲ್ಲಿ 01–04–1983ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ಗಣಿ ಗುತ್ತಿಗೆಯನ್ನು ನವೀಕರಿಸಲಾಗಿದೆ. ಉಳಿದ ಪ್ರದೇಶವು ಕಾಯ್ದಿರಿಸಿದ ಅರಣ್ಯ ವ್ಯಾಪ್ತಿಗೆ ಬರುವುದರಿಂದ ಪರಿಗಣಿಸಿರುವುದಿಲ್ಲ.

ಮೆ:ವಿ.ಐ.ಎಸ್.ಎಲ್.ಸಂಸ್ಥೆಗೆ 1963ರಲ್ಲಿ ಗಣಿ ಗುತ್ತಿಗೆ ನೀಡಿರುವುದರಿಂದ ಹಾಗೂ ಆ ಸಮಯದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಯಲ್ಲಿ ಇಲ್ಲದ್ದರಿಂದ, ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದುಕೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ.

ಇ) ಈವರೆವಿಗು ಈ ಪ್ರದೇಶದಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಿರುವುದಿಲ್ಲ.

968(1491) ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ(ಬೆಳ್ಳಾವಿ) : ಮಾನ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಿನಿಸ್ಟ್ರಿ ಆಫ್ ಕಮ್ಯೂನಿಕೇಶನ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ರಚಿಸಿರುವ ಸಹಕಾರ ನಗರ ಬಡಾವಣೆಯಲ್ಲಿ ಉದ್ಯಾನವನ ಮತ್ತು ಶಾಪಿಂಗ್ ಕಾಂಪ್ಲೆಕ್ಸ್‌ಗಾಗಿ (ಸಿ.ಎ.) ಮೀಸಲಿಟ್ಟ ಸ್ಥಳವನ್ನು ನಿವೇಶನ ರಚಿಸಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಈ ಸ್ಥಳದಲ್ಲಿ ನಿವೇಶನಗಳನ್ನು ರಚಿಸಿ ಮಾರಾಟ ಮಾಡಿರುವುದೆ(ವಿವರ ಒದಗಿಸುವುದು) :

ಇ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು(ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಉದ್ಯಾನವನ:ಬಯಲು ಜಾಗ 11

ಸಿ.ಎ. 55

ಖುಲ್ಲಾ ಜಾಗ 04